**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 534/2019

ಪಿಡಬ್ಲು :1 ಸಿಡಬ್ಲು :1

| | |
|---|---|
| ಸಾಕ್ಷಿಯ ಹೆಸರು | : ಶ್ರೀಮತಿ.ಮಲ್ಲವ್ವ ಭಜಂತ್ರಿ |
| ಗಂಡನ ಹೆಸರು | : ಶ್ರೀ. ಮುತ್ತೆಪ್ಪ |
| ವಯಸ್ಸು | : 40 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸ್ತವ್ಯ | : ಹುಬ್ಬರವಾಡಿ, ತಾಲೂಕುಃ ರಾಯಬಾಗ |
| ದಿನಾಂಕ | : 11-11-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 8 ನನ್ನ ಗಂಡ. ಚಾಸಾಃ 9 ವಿಜಯಕುಮಾರ ಮತ್ತು ಚಾಸಾಃ 10 ವಿನಯಕುಮಾರ ನನ್ನ ಮಕ್ಕಳು. ಚಾಸಾಃ 11 ಶಂಕರ ಬಡೋದೆ, ಚಾಸಾಃ 12 ಮಹೇಶ ನನಗೆ ಗೊತ್ತಿರುತ್ತಾರೆ. ನಾನು ಹಿಂದೂ ಕೊರವ ಜಾತಿಗೆ ಸೇರಿದ್ದೇನೆ.

2. 1 ರಿಂದ 3 ನೇ ಆರೋಪಿತರು ನನಗೆ ಗೊತ್ತಿರುತ್ತಾರೆ. ಅವರು ಹಿಂದೂ ಕುರಬ ಜಾತಿಗೆ ಸೇರಿರುತ್ತಾರೆ. 4 ಮತ್ತು 6 ನೇ ಆರೋಪಿತರು ನನಗೆ ಗೊತ್ತಿರುತ್ತಾರೆ. ಅವರು ಹಿಂದೂ ವಡ್ಡರ ಜಾತಿಗೆ ಸೇರಿರುತ್ತಾರೆ. ಪ್ರವೀಣ ಎನ್ನುವವನು ಬಾಲಾಪರಾಧಿಯಾಗಿರುತ್ತಾನೆ. ಆರೋಪಿತರೆಲ್ಲರೂ ನಮ್ಮ ಊರಿನವರು.

3. 2019 ನೇ ಇಸವಿಯಲ್ಲಿ ಜಗಳ ಆಗಿರುತ್ತದೆ. ಅದಕ್ಕಿಂತ 10-12 ವರ್ಷಗಳ ಮೊದಲಿನಿಂದ ಕೊಟ್ರೆ ತೋಟದ ಹತ್ತಿರ ಇರುವ ಗೋಮಾಳ, ಸರ್ವೇ ನಂಬರ 120 ರಲ್ಲಿ

ಗುಡಿಸಲು ಕಟ್ಟಿಕೊಂಡು ವಾಸ ಇದ್ದೇವು. 1 ನೇ ಆರೋಪಿ ಮಲಕಾರಿ ಕೊಟ್ರೆ, 2 ನೇ ಆರೋಪಿ ಸಿದ್ದಪ್ಪ ಕೊಟ್ರೆ, 3 ನೇ ಆರೋಪಿ ವಿಠ್ಠಲ ಕೊಟ್ರೆ ಇವರುಗಳೂ ಸಹ ನಮ್ಮ ಗುಡಿಸಲು ಪಕ್ಕದಲ್ಲಿ ಜಮೀನು ಇದ್ದು ಅದರಲ್ಲಿ ಮನೆ ಮಾಡಿಕೊಂಡು ವಾಸ ಇದ್ದರು. 4 ಮತ್ತು 6 ನೇ ಆರೋಪಿತರು ಗೋಮಾಳದಲ್ಲಿ ಮನೆ ಮಾಡಿಕೊಂಡು ವಾಸ ಇದ್ದರು.

4. ನಮಗೆ ಸರ್ಕಾರದ ಅಂಬೇಡ್ಕರ ವಸತಿ ಯೋಜನೆ ಅಡಿಯಲ್ಲಿ ನಮಗೆ ಮನೆ ಮಂಜೂರಾಗಿತ್ತು, ನಾವು ಮನೆ ಕಟ್ಟುವ ತಯಾರಿ ನಡೆಸುತ್ತಿದ್ದೇವು. ದಿನಾಂಕಃ 14-02-2019 ರಂದು ಮನೆ ನಿರ್ಮಿಸಲು ಪಾಯದ ಕಲ್ಲುಗಳನ್ನು ನಮ್ಮ ಗುಡಿಸಿಲಿನ ಪಕ್ಕದಲ್ಲಿ ಟ್ರ್ಯಾಕ್ಟರನಲ್ಲಿ ತಂದು ಹಾಕಿಸಿದ್ದೇವು. ಬೆಳಗ್ಗೆ ಸುಮಾರು 8:00 ಗಂಟೆ ಸುಮಾರಿಗೆ ಕಲ್ಲನ್ನು ಹಾಕಿಸಿದ್ದೇವು. ಅದೇ ದಿನ ಬೆಳಗ್ಗೆ ಸುಮಾರು 8:30 ಗಂಟೆ ಸುಮಾರಿಗೆ ನಾನು, ನನ್ನ ಗಂಡ ಮತ್ತು ನನ್ನ ಮಕ್ಕಳು ಮನೆಯ ಮುಂದೆ ಇದ್ದಾಗ 1 ರಿಂದ 3 ನೇ ಆರೋಪಿತರು ಸ್ಥಳಕ್ಕೆ ಬಂದು ನೀವು ಸ್ಥಳದಲ್ಲಿ ಇರಬೇಡಿ, ನೀವು ಕೀಳು ಜಾತಿಯವರು, ಕೊರವ ಜಾತಿಯವರು ಎಂದು ಜಾತಿ ಹೆಸರು ಹಿಡಿದು ಅವಾಚ್ಯ ಶಬ್ದಗಳಿಂದ ಬೈದು, ನನ್ನ ಗಂಡನಿಗೆ 1 ನೇ ಆರೋಪಿ ಮಲಕಾರಿ ಕೊಟ್ರೆ ಅವರು ಶರ್ಟನ್ನು ಹಿಡಿದು ಜಗ್ಗಾಡಿ ಕೈಯಿಂದ ಹೊಡೆದಿರುತ್ತಾರೆ, ನನ್ನ ಗಂಡ ಕೆಳಗೆ ಬಿದ್ದಾಗ ಆತನಿಗೆ ಹೊರಳಾಡಿಸಿ ಕಾಲಿನಲ್ಲಿ ಒದ್ದಿರುತ್ತಾರೆ.

5. 2 ನೇ ಆರೋಪಿ ಸಿದ್ದಪ್ಪ ಕೊಟ್ರೆ ಅವರು ಕುಡಗೋಲು ತಂದು ನನ್ನ ಗಂಡನ ಎರಡೂ ಭುಜಗಳಿಗೆ, ತಲೆಗೆ ಹೊಡೆದಿರುತ್ತಾರೆ. ನನ್ನ ಗಂಡನಿಗೆ ರಕ್ತ ಸುರಿಯುತ್ತಿತ್ತು.

6. 3 ನೇ ಆರೋಪಿ ವಿಠ್ಠಲ ಅವರೂ ಸಹ ನಮ್ಮ ಮನೆಯ ಮುಂದೆ ಇದ್ದ ಸೈಕಲ ಪಂಪ್ ತೆಗೆದುಕೊಂಡು ನನ್ನ ಗಂಡನಿಗೆ ಬೆನ್ನಿಗೆ, ರಟ್ಟೆಗಳಿಗೆ, ತಲೆಯ ಹಿಂಭಾಗಕ್ಕೆ, ಕೈಗೆ, ಕಾಲಿಗೆ ಹೊಡೆದಿರುತ್ತಾನೆ.

7. ನನ್ನ ಇಬ್ಬರೂ ಸಣ್ಣ ಮಕ್ಕಳಿಗೂ ಆರೋಪಿತರು ಹೊಡೆಯುತ್ತಾರೆ ಎಂದು ಹೇಳಿ ಅವರಿಗೆ ಹೊಲದ ಕಡೆಗೆ ಕಳುಹಿಸಿದೆನು, ನನ್ನ ಗಂಡನನ್ನು ನಾನು ಬಿಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನು. ಆ ಸಮಯದಲ್ಲಿ 1, 2 ಮತ್ತು 3 ನೇ ಆರೋಪಿತರು ನನ್ನ ತಲೆಯ ಕೂದಲು ಹಿಡಿದು ಜಗ್ಗಾಡಿರುತ್ತಾರೆ, ಸೀರೆ ಹಿಡಿದು ಜಗ್ಗಾಡಿರುತ್ತಾರೆ, ಕಬ್ಬಿಣದ ಸರಳಿನಿಂದ ನನ್ನ ಬಲಗಾಲಿಗೆ ಮತ್ತು ಸೊಂಟಕ್ಕೆ ಹೊಡೆದಿರುತ್ತಾರೆ. ಕಬ್ಬಿಣದ ರಾಡ್ ಅಂದರೆ ಸೈಕಲ ಪಂಪ್ ನಲ್ಲಿರುವ ರಾಡ್, ಅದನ್ನು ತೆಗೆದುಕೊಂಡು 4 ನೇ ಆರೋಪಿ ನನಗೆ ಬಲಗೈಗೆ, ಬೆನ್ನಿಗೆ ಮತ್ತು ತೊಡೆಗೆ ಹೊಡೆದಿರುತ್ತಾನೆ.

8. 6 ನೇ ಆರೋಪಿ ಸೋಪನಕಾಕ ಅವರು ನನ್ನ ತಲೆಗೆ ಕೂದಲನ್ನು ಹಿಡಿದು ಜಗ್ಗಾಡಿರುತ್ತಾರೆ ಮತ್ತು ನನ್ನ ಗಂಡನಿಗೂ ಹೊಡೆದಿರುತ್ತಾರೆ. ನನ್ನ ಗಂಡ ಪ್ರಜ್ಞೆ ತಪ್ಪಿ ಬಿದ್ದಿದ್ದನು ಅದಕ್ಕೆ ಆತನು ತೀರಿಕೊಂಡನು ಎಂದು ಭಾವಿಸಿ ಆರೋಪಿತರು ಹೊರಟು ಹೋದರು. ನನ್ನ ಗಂಡನಿಗೆ ಪ್ರಜ್ಞೆ ಬಂದಾಗ ಸೋಪನಕಾಕ ಅವರು ಪುನಃ ನನ್ನ ಗಂಡನಿಗೆ ಕಬ್ಬಿಣದ ರಾಡ್‌ನಿಂದ ಹೊಡೆದಿರುತ್ತಾರೆ. ನನ್ನ ಗಂಡನನ್ನು ಕೊಲೆ ಮಾಡಲೇಬೇಕು ಎನ್ನುವ ಉದ್ದೇಶದಿಂದ ಅವರು ಆ ರೀತಿ ಹೊಡೆದಿರುತ್ತಾರೆ.

9. ಘಟನೆಯನ್ನು ಕಲ್ಲನ್ನು ತಂದಿದ್ದಂತಹ ಟ್ರ್ಯಾಕ್ಟರ ಡ್ರೈವರ ಗೋಪಾಲ ಬಿದರಿ ನೋಡಿರುತ್ತಾನೆ. ಇನ್ನೊಬ್ಬರು ಇದ್ದರು ಅವರ ಹೆಸರು ನನಗೆ ಈಗ ನೆನಪಿರುವುದಿಲ್ಲ. ನಾನು ಅಂಬ್ಯುಲೆನ್ಸಗೆ ಫೋನ ಮಾಡಿ ಕರೆಸಿರುತ್ತೇನೆ. ನಾನು ಅಂಬ್ಯುಲೆನ್ಸನಲ್ಲಿ ನನ್ನ ಗಂಡ ಮತ್ತು ಮಕ್ಕಳನ್ನು ಕರೆದುಕೊಂಡು ರಾಯಬಾಗ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಕೃತ್ಯಕ್ಕೆ ಬಳಸಿದ ಕುಡಗೋಲು, ಸೈಕಲ ಪಂಪ್‌ನ ಕಬ್ಬಿಣದ ಹೊರಗಿನ ಭಾಗವನ್ನು ಆರೋಪಿತರು ತೆಗೆದುಕೊಂಡು ಹೋದರು, ಸೈಕಲ ಪಂಪ್‌ನ ಒಳಭಾಗವನ್ನು ನಮ್ಮ ಮನೆಯ ಮುಂದೆ ಬಿಸಾಡಿ ಹೋಗಿದ್ದರು.

10. ಆರೋಪಿತರು ನಮಗೆ ಕಲ್ಲಿನಿಂದಲೂ ಸಹ ಹೊಡೆದಿರುತ್ತಾರೆ. ಸಿದ್ದಪ್ಪ ಕೊಟ್ರೆ ಮತ್ತು ವಿಠ್ಠಲ ಕೊಟ್ರೆ ನನ್ನ ಮಕ್ಕಳಿಗೂ ಸಹ ಹೊಡೆದಿರುತ್ತಾರೆ. ಆ ನಂತರ ನಾನು ನನ್ನ ಮಕ್ಕಳಿಗೆ ಹೆ ಹೊರಗೆ ಕಳುಹಿಸಿರುತ್ತೇನೆ.

11. ರಾಯಬಾಗ ಸರ್ಕಾರಿ ಆಸ್ಪತ್ರೆಯವರು ನನ್ನ ಗಂಡನಿಗೆ ಇಲ್ಲಿ ಆಗುವುದಿಲ್ಲ, ನೀವು ಮಿರಜ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿ ಅಂಬ್ಯುಲೆನ್ಸನಲ್ಲಿ ಮಿರಜ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ನಾನು ರಾಯಬಾಗ ಸರ್ಕಾರಿ ಆಸ್ಪತ್ರೆಯಲ್ಲಿ ಮತ್ತು ಮಿರಜ ಆಸ್ಪತ್ರೆಯಲ್ಲಿ ತೋರಿಸಿಕೊಂಡು ಚಿಕಿತ್ಸೆ ಪಡೆದುಕೊಂಡಿದ್ದೇನೆ. ಮಿರಜ ಆಸ್ಪತ್ರೆಯಲ್ಲಿ ನನ್ನ ಗಂಡ ಒಂದು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದು, ಪುನಃ ರಾಯಬಾಗ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತೇವೆ. ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದ ನಂತರ ನಮ್ಮ ಸಂಬಂಧಿಕರನ್ನು ಆಸ್ಪತ್ರೆಗೆ ಕರೆಸಿಕೊಂಡು ವಿಚಾರ ಮಾಡಿ ನಂತರ ದೂರು ನೀಡಿರುತ್ತೇನೆ.

**ಈ ಹಂತದಲ್ಲಿ ಮೂಲ ದೂರು ಮತ್ತು ಪ್ರಥಮ ವರ್ತಮಾನ ವರದಿಯು ಕಡತದಲ್ಲಿ ಲಭ್ಯ ಇಲ್ಲದೇ ಇರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಗಾಗಿ ಪ್ರಕರಣವನ್ನು ಕಾಯ್ದಿರಿಸಲಾಯಿತು.**

**ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

12. ದೂರನ್ನು ಹಾಗೂ ಅದರ ಮೇಲಿರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದಾರೆ. ದೂರನ್ನು ನಿಪಿ–1 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–1 [ಎ] ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ–2 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–2 [ಎ] ಎಂದು ಗುರುತಿಸಲಾಯಿತು.

13. ದಿನಾಂಕಃ 19-02-2019 ರಂದು ಪೋಲಿಸರು ಕೃತ್ಯ ನಡೆದ ಸ್ಥಳವಾದ ನಮ್ಮ ಮನೆಯ ಪಕ್ಕದಲ್ಲಿರುವ ಜಾಗಕ್ಕೆ ಬಂದಿದ್ದರು. ನಾನು ಪೋಲಿಸರಿಗೆ ಸ್ಥಳ ತೋರಿಸಿದ್ದೇನೆ. ಆ ಸಮಯದಲ್ಲಿ ಚಾಸಾಃ 2 ಲಗಮಣ್ಣ ಮತ್ತು ಚಾಸಾಃ 3 ವಿನಾಯಕ ಬಡೋದೆ ಎನ್ನುವವರು ಇದ್ದರು. ಸ್ಥಳದಲ್ಲಿ ನಾನು ಪೋಲಿಸರಿಗೆ ಸೈಕಲ ಪಂಪ್‌ನ ಒಳಭಾಗವನ್ನು ನೀಡಿದ್ದೇನೆ, ಅಲ್ಲದೇ ಸ್ಥಳದಲ್ಲಿದ್ದ, ರಕ್ತ ಅಂಟಿದ್ದ ಕಲ್ಲನ್ನೂ ಸಹ ಪೋಲಿಸರು ತೆಗೆದುಕೊಂಡಿದ್ದಾರೆ. ಅವುಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ. ಪಂಚನಾಮೆ ಮಾಡಿದ ಸಮಯದಲ್ಲಿ ಪೋಲಿಸರು ಪೋಟೋವನ್ನು ತೆಗೆದಿದ್ದಾರೆ. ಪೋಟೋದಲ್ಲಿ ತಮ್ಮ ಇರುವಿಕೆಯನ್ನು ಚಾಸಾಃ 2 ಮತ್ತು ಚಾಸಾಃ 3 ಮತ್ತು ಪೋಲಿಸರ ಇರುವಿಕೆಯನ್ನು ಗುರುತಿಸಿದ್ದಾರೆ. ಪೋಟೋ ವಿದ್ಯುನ್ಮಾನ ದಾಖಲೆಯಾಗಿದ್ದು ಅದನ್ನು ಗುರುತಿಸುವಿಕೆಗೆ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರ ಲಭ್ಯ ಇಲ್ಲದೇ ಇರುವುದರಿಂದ ಅವುಗಳನ್ನು ಸಾಕ್ಷಿಯಾಗಿ ಗುರುತಿಸಿರುವುದಿಲ್ಲ.

14. ನ್ಯಾಯಾಲಯದಲ್ಲಿ ಹಾಜರುಮಾಡಿರುವ ವಸ್ತುಗಳನ್ನು ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರವರು ಮನವಿಯನ್ನು ಮಾಡಿರುತ್ತಾರೆ. ಮನವಿಯನ್ನು ಪರಿಗಣಿಸಿ ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಬಿಳಿಯ ಬಣ್ಣದ ಬಟ್ಟೆಯಿಂದ ಸುತ್ತಿರುವ FSL ಸೀಲು ಇರುವ ಒಂದು ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ಗಾಳಿ ಹಾಕುವ ಪಂಪ್‌ನ ಒಳಭಾಗದಲ್ಲಿರುವ ಕಬ್ಬಿಣದ ರಾಡ್ ಮತ್ತು ವಾಲ್ವನ್ನು ಗುರುತಿಸಿರುತ್ತಾರೆ, ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

15. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಬಿಳಿಯ ಬಣ್ಣದ ಬಟ್ಟೆಯಿಂದ ಸುತ್ತಿರುವ FSL ಸೀಲು ಇರುವ ಒಂದು ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ಕಲ್ಲನ್ನು ಗುರುತಿಸಿರುತ್ತಾರೆ, ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು.

16. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಬಿಳಿಯ ಬಣ್ಣದ ಬಟ್ಟೆಯಿಂದ ಸುತ್ತಿರುವ FSL ಸೀಲು ಇರುವ ಒಂದು ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ಕುಡಗೋಲನ್ನು ಗುರುತಿಸಿರುತ್ತಾರೆ, ಅದನ್ನು ಮು.ಮಾ.3 ಎಂದು ಗುರುತಿಸಲಾಯಿತು.

17. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಬಿಳಿಯ ಬಣ್ಣದ ಬಟ್ಟೆಯಿಂದ ಸುತ್ತಿರುವ FSL ಸೀಲು ಇರುವ ಒಂದು ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ಪೈಪನ್ನು ತೋರಿಸಲಾಗಿ ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಪೈಪ್ ಅಲ್ಲ ಎಂದು ಹೇಳಿದ್ದಾರೆ.

18. ಘಟನೆಯ ಸಮಯದಲ್ಲಿ ನನ್ನ ಗಂಡ ಧರಿಸಿದ ಬಟ್ಟೆಗಳಾದ ಬರಮೋಡ ಮತ್ತು ಬನಿಯನ್ ಮೇಲೆ ರಕ್ತ ಸೋರಿತ್ತು. ಘಟನೆಯ ಬಗ್ಗೆ ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

19. ಈ ಹಿಂದೆ ನಾನು ರಾಯಬಾಗ ಕೋರ್ಟಿನಲ್ಲಿ ನ್ಯಾಯಾಧೀಶರ ಮುಂದೆ ಸ್ವಇಚ್ಚೆಯಿಂದ ದಂಡ ಪ್ರಕ್ರಿಯೆ ಸಂಹಿತೆ ಕಲಂ 164 ಅಡಿಯಲ್ಲಿ ಹೇಳಿಕೆಯನ್ನು ನೀಡಿದ್ದೇನೆ. O/W ನಂಬರ 637/2019, ದಿನಾಂಕಃ 25-02-2019 ಜೆ.ಎಮ್.ಎಫ್.ಸಿ ನ್ಯಾಯಾಲಯ ರಾಯಬಾಗ ಇವರ ಕಳುಹಿಸಿಕೊಟ್ಟಿರುವ ಸೀಲು ಮಾಡಲಾದ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ಹೇಳಿಕೆಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಅದರಲ್ಲಿದ್ದ ಸಾಕ್ಷಿಯ ಹೇಳಿಕೆಯನ್ನು ಕಡತದಲ್ಲಿ ಇರಿಸಲಾಯಿತು.

20. ನನ್ನ ಗಂಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರಿಂದ ದೂರನ್ನು ನೀಡಲು ತಡವಾಗಿರುತ್ತದೆ. ಆರೋಪಿತರು ನನ್ನ ಗಂಡನಿಗೆ ಹೊಡೆದ ಪೈಪ್ ಕಬ್ಬಿಣದಾಗಿತ್ತು, ಅದಕ್ಕೆ ಹಿಡಿ ಇತ್ತು, ಅದರಿಂದ ನನ್ನ ಗಂಡನಿಗೆ ಹೊಡೆದ ರಭಸಕ್ಕೆ ಅದು ಬೆಂಡಾಗಿ ಮುದ್ದೆಯಾಗಿತ್ತು.

**ಪಾಟೀ ಸವಾಲು:ಶ್ರೀ.ಬಿ.ಜೆ.ಜಿ ವಕೀಲರಿಂದ ಆರೋಪಿತರ ಪರ**

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.